# ಜಿಲ್ಲಾ ಪಂಚಾಯತ್ ಉಡುಪಿ

**ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ರಜತಾದ್ರಿ ಮಣಿಪಾಲ-576104, ಉಡುಪಿ ಜಿಲ್ಲೆ**

ಸಂ:ಮ.ಮ.ಪ.ಕ ಮಾಸಾಚರಣೆ/2015-16 ದಿನಾಂಕ:04/09/2015

## ಜ್ಞಾಪನಾ

**ವಿಷಯ:** ನವಂಬರ್ 2015 ರ ತಿಂಗಳಲ್ಲಿ ಮಗ್ಗಿ ಮತ್ತು ಪದ್ಯ(Rhyme) ಗಳ ಕಂಠಪಾಠ ಮತ್ತು ಕಲಿಕಾ ದೃಢೀಕರಣ ಮಾಸಾಚರಣೆಯನ್ನಾಗಿ ಆಚರಿಸುವ ಬಗ್ಗೆ

**************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ನವಂಬರ್ 2015 ರ ತಿಂಗಳಲ್ಲಿ ಮಗ್ಗಿ ಮತ್ತು ಪದ್ಯ (Rhymes) ಗಳ ಕಂಠಪಾಠ ಮತ್ತು ಕಲಿಕಾ ದೃಢೀಕರಣ ಮಾಸಾಚರಣೆಯನ್ನಾಗಿ ಮಾಡಲು ಎಲ್ಲ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 2 ರ ಮಗ್ಗಿಯಿಂದ 20 ರ ಮಗ್ಗಿಗಳನ್ನು ಮತ್ತು ಪದ್ಯಗಳನ್ನು (Rhymes) ದಿನಾಲೂ ವಿದ್ಯಾರ್ಥಿಗಳಿಗೆ ಬರೆಯಲು ಹಾಗೂ ಕಂಠಪಾಠ ಮಾಡಲು 2 ದಿನ ಮುಂಚಿತವಾಗಿ ತಿಳಿಸುವುದು. 2 ದಿನದ ನಂತರ ಬರೆದ ಮಗ್ಗಿ ಮತ್ತು ಪದ್ಯಗಳನ್ನು ವಿದ್ಯಾರ್ಥಿಗಳ Profile ಗೆ ಹಾಕಿ ಕಂಠಪಾಠ ಮಾಡಿದ ಬಗ್ಗೆ ದೃಢೀಕರಿಸುವುದು. ಎಲ್ಲಾ ಪದ್ಯ ಮತ್ತು ಮಗ್ಗಿಗಳನ್ನು ಕಂಠಪಾಠ ಮಾಡಿದ ನಂತರ ವಿವಿಧ ಸಾಧನ ಗಳಿಂದ ಕಲಿಕೆಯನ್ನು ದೃಢೀಕರಿಸುವುದು.

**ಉದಾ:** 12, 24, 42 ಸಂಖ್ಯೆಗಳು ಇತ್ಯಾದಿ ಬರುವ ಮಗ್ಗಿಯನ್ನು ಬರೆಯಲು ತಿಳಿಸುವುದು. ಅಥವಾ ಮೌಖಿಕವಾಗಿ ಕೇಳುವುದು. ದೃಢೀಕರಣ ಮಾಡಿದ ದಾಖಲೆಗಳನ್ನು ವಿದ್ಯಾರ್ಥಿಗಳ Profile ಗೆ ಹಾಕುವುದು. ಒಂದೊಂದು ತರಗತಿಗೆ ನಿರ್ದಿಷ್ಟಪಡಿಸಿದ ಪದ್ಯಗಳು, Rhymes ಗಳನ್ನು ಕೂಡ ಇದೇ ರೀತಿಯಾಗಿ 2 ದಿನ ಮುಂಚಿತವಾಗಿ ತಿಳಿಸಿ ನಂತರ ಅದನ್ನು ಕಂಠಪಾಠ ಮಾಡಿಸಿ ಅಥವಾ ಕೇಳಿಸಿ ದಾಖಲೆಗಳನ್ನು ಮಾಡುವುದು.

ಒಟ್ಟಿನಲ್ಲಿ ನವಂಬರ್ 2015 ರ ತಿಂಗಳಲ್ಲಿ ವಿದ್ಯಾರ್ಥಿಗಳು ಪೂರ್ಣ ಪ್ರಮಾಣದಲ್ಲಿ ಮಗ್ಗಿ ಕಲಿಕೆ ಆಗಬೇಕಾದಂತಹ ಮೂಲ ಕ್ರಿಯೆಗಳ ಬಗ್ಗೆ ಕಲಿಕೆಯಾಗಬೇಕು ಇದನ್ನು ಪ್ರತಿ ಶಾಲೆಯಲ್ಲಿ ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಈ ಮೂಲಕ ಆದೇಶಿಸಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವಲಯದ ಎಲ್ಲಾ ಶಾಲೆಗಳಲ್ಲಿ ಕಲಿಕಾ ಮಾಸಾಚರಣೆ ಮಾಡಲು ಸೂಕ್ತ ಕ್ರಮ ವಹಿಸುವುದು

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಉಡುಪಿ ಜಿಲ್ಲೆ

**ಸೂಕ್ತ ಕ್ರಮಕ್ಕಾಗಿ,**

1. ಕ್ಷೇತ್ರ ಶಿಕ್ಷಣಾಧಿಕಾರಿಗಳು/ಕ್ಷೇತ್ರ ಸಮನ್ವಯಾಧಿಕಾರಿಗಳು ಬ್ರಹ್ಮಾವರ/ಬೈಂದೂರು/ಕಾರ್ಕಳ/ಕುಂದಾಪುರ/ಉಡುಪಿ ವಲಯ

**ಪ್ರತಿ,**

1. ಮಾನ್ಯ ನಿರ್ದೇಶಕರು DSERT ಬೆಂಗಳೂರು ಇವರಿಗೆ ಅವಗಾಹನೆಗಾಗಿ
2. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಉಡುಪಿ ಜಿಲ್ಲೆ ಇವರಿಗೆ ಅವಗಾಹನೆಗಾಗಿ
3. ಉಪನಿರ್ದೇಶಕರು ಅಭಿವೃದ್ಧಿ ಡಯಟ್ ಉಡುಪಿ
4. ಕಛೇರಿ ಪ್ರತಿ